

(6ನೇ ಪುಟದಿಂದ)

ಸಾಗುವುದು ಕಷ್ಟಸಾಧ್ಯವೆನಿಸಿತು. ನಾವೆಲ್ಲ ಅದನ್ನು ಬಿಟ್ಟು ಒಂದೇ ಜೀಪಿನಲ್ಲಿ ಹಿಂದಕ್ಕೆ ಹೆಜ್ಜೆ ಹಾಕಿದೆವು. ಅದೇ ಮಾರ್ಗವಾಗಿ ವಾಪಸ್ ಬರುತ್ತಿದ್ದರೆ ಸತೀಶ್ ಸರ್ ಆ ಗೂಬೆಯಂಥ ಪಕ್ಷಿಯನ್ನು ಮತ್ತೆ ಕಂಡರು. ಅದು ಪುಣುಗು ಬೆಕ್ಕೊಂದನ್ನು ಬೇಟೆಯಾಡಿ ಕೂತಿತ್ತು. 'ಸಚಿ ಈ ಸಾರಿ ಬಿಡಬೇಡ ಚೆನ್ನಾಗಿ ಶಾಟ್ ತೆಗೆದುಕೋ' ಎಂದು ಕೂಗಿದರು.

ನಾನು ನನ್ನ 70–300ಎಂಎಂ ಝೂಮ್ ಲೆನ್ಸ್ ರೆಡಿ ಮಾಡಿಕೊಂಡೆ. ನನ್ನ ಬಳಿ ಪ್ರತ್ಯೇಕ ಫ್ಲ್ಯಾಶ್ ಗನ್ ಇರಲಿಲ್ಲ. ಲಭ್ಯ ಪರಿಕರಗಳಿಂದಲೇ ಶಾಟ್ ತೆಗೆದುಕೊಳ್ಳಬೇಕಿತ್ತು. ನನ್ನ ಕ್ಯಾಮೆರಾದ ಐಎಸ್ಒ ಸೆಟಿಂಗ್ಸ್ ಅನ್ನು 1600ಕ್ಕೆ ಬೂಸ್ಟ್ ಮಾಡಿಕೊಂಡೆ. ನಿಕಾನ್ ಕ್ಯಾಮೆರಾ ಈ ಸೆಟಿಂಗ್ಸ್‌ನಲ್ಲಿ ಒಳ್ಳೆಯ ಫಲಿತಾಂಶ ಕೊಡುವಂಥದು. ಕ್ಯಾಮೆರಾದ ಶಟರ್ ಅನ್ನು 1/60ಗೆ ಸೆಟ್ ಮಾಡಿ ಫ್ಲ್ಯಾಶ್ ಇಂಟೆನ್ಸಿಟಿ ಅನ್ನು ಮತ್ತಷ್ಟು ಗರಿಷ್ಠ ಪ್ರಮಾಣಕ್ಕೆ ಹೆಚ್ಚಿಸಿಕೊಂಡೆ. ಇರುವ ಸಮಯದಲ್ಲಿ ಯಾವ ಕ್ಷಣವನ್ನೂ ವ್ಯರ್ಥ ಮಾಡದೇ ಶಾಟ್‌ಗೆ ಸಿದ್ಧತೆ ಮಾಡಿಕೊಂಡೆ. ಕೈಯಲ್ಲಿದ್ದ 11 ಎಲ್ಇಡಿ ಬಲ್ಬ್ ಅನ್ನು ಸ್ನೇಹಿತರ ಕೈಗಿತ್ತೆ. ಯಾಕೆಂದರೆ ನನಗೆ ಶೂಟ್ ಮಾಡಬೇಕಿದ್ದ ವಸ್ತುವಿನ ಮೇಲೆ ಹೆಚ್ಚು ನಿಗಾ ವಹಿಸಬೇಕಿತ್ತು. ಸ್ನೇಹಿತರು ಟಾರ್ಚ್ ಲೈಟ್ ಮೂಲಕ ಆ ಪಕ್ಷಿಯ ಮೇಲೆ ಬೆಳಕು ಚೆಲ್ಲಿದರು. ಕ್ಯಾಮೆರಾದ ಗುಂಡಿ ಒತ್ತಿದೆ. ಅದೇ ಸಮಯಕ್ಕೆ ಸರಿಯಾಗಿ ಗೂಬೆ ತನ್ನ ಕತ್ತು ತಿರುಗಿಸಿ ಗತ್ತಿನ ಪೋಸು ನೀಡಿತು. ಅದಕ್ಕೂ ಫೋಟೊ ತೆಗೆಯಿಸಿಕೊಳ್ಳುವುದು ಇಷ್ಟವೆಂಬಂತೆ ಕೊಟ್ಟ ಪೋಸು ಅದಾಗಿತ್ತು. ನನ್ನ ಕ್ಯಾಮೆರಾ ಆ ಅದ್ಭುತ, ಅಪರೂಪದ 'ಕಾಡಿನ ವ್ಯಕ್ತಿ'ಯ ಚಿತ್ರ ಸೆರೆಹಿಡಿದುಕೊಂಡಿತ್ತು. ವೈಲ್ಡ್ ಲೈಫ್ ಫೋಟೊಗ್ರಾಫಿ ರಂಗದ ಹೆಸರಾಂತ ಬರ್ಡ್ ಫೋಟೊಗ್ರಾಫರ್ ಕ್ಲೆಮೆಂಟ್ ಫ್ರಾನ್ಸಿಸ್ ಈ ಚಿತ್ರವನ್ನು ತುಂಬ ಮೆಚ್ಚಿಕೊಂಡರು. ಫ್ರಾನ್ಸಿಸ್, 'ಟೀಚರ್ಸ್ ಲೈಫ್‌ಟೈಂ ಅಚೀವ್‌ಮೆಂಟ್ ಅವಾರ್ಡ್' ಪುರಸ್ಕೃತರು. ಇಂಡಿಯಾನೇಚರ್ ವಾಚ್.ನೆಟ್ ಮತ್ತು ಫೇಸ್‌ಬುಕ್ ಗೆಳೆಯರೂ ಈ ಚಿತ್ರದ ಬಗ್ಗೆ ಒಳ್ಳೆಯ ಕಾಮೆಂಟ್ಸ್ ಮಾಡಿದರು.

ಪಕ್ಷಿಯನ್ನು ಹಿಡಿಯುವಾಸೆಯಾಗಿತ್ತು. ಜತೆಯಲ್ಲಿದ್ದ ಗೌರಿಶಂಕರ್ ಮತ್ತು ಸ್ನೇಹಿತರು ಮೆಲ್ಲಗೆ ಅದರ ಹತ್ತಿರಕ್ಕೆ ಹೋಗಲೆತ್ನಿಸಿದೆವು. ಗೌರಿ ಸಣ್ಣ ಮರದ ಕೊಂಬೆಗೆ ಕಾಲಿಡುತ್ತಿದ್ದಂತೆ ಅದು ತುಂಡಾಗಿ ನೆಲಕ್ಕುರುಳಿದ್ದರಿಂದ ದೊಡ್ಡ ಸದ್ದಾಯಿತು. ಪಕ್ಷಿ ಹಾರಿತು. ಅದು ಕನಿಷ್ಠವೆಂದರೂ 4ರಿಂದ 5 ಕಿಲೋ ತೂಗುವಂಥದು. ಅದರ ಗತ್ತು, ಕೊಟ್ಟ ಪೋಸು, ಮತ್ತು ನಾವೆಲ್ಲ ಅದರ ಸಾಮಿಪ್ಯಕ್ಕೆ ಹೋಗಿದ್ದೆಲ್ಲವೂ ಒಂದು ರೋಮಾಂಚನಕಾರಿ ಅನುಭವ.

ಈ ಗೂಬೆ ಹೆಸರು: **ಸ್ಪಾಟ್ ಬೆಲೀಡ್ ಈಗಲ್ ಓವಲ್**
**ಅಥವಾ ಫಾರೆಸ್ಟ್ ಈಗಲ್ ಓವಲ್**

ಕಿಂಗ್‌ಡಂ: **ಎನಿಮಲಿಯಾ**
ಫ್ಯಾಮಿಲಿ: **ಸ್ಟ್ರಿಗಿದೇ**
ತೂಕ: **4ರಿಂದ 5 ಕೆಜಿ.**

ಡಿಸೆಂಬರ್‌ನಿಂದ ಮಾರ್ಚ್‌ವರೆಗಿನ ಅವಧಿ ಅದಕ್ಕೆ ಗೂಡು ಕಟ್ಟುವ ಸೀಜನ್. ಸಣ್ಣಪುಟ್ಟ ಸಸ್ತನಿ ಪ್ರಾಣಿ, ಸರಿಸೃಪಗಳು, ಹಕ್ಕಿಗಳನ್ನು ಅದು ಬೇಟೆಯಾಡುತ್ತದೆ. (ಆದರೆ ಅಂದು ಅದು ಸಣ್ಣ ಪುಣುಗ ಬೆಕ್ಕೊಂದನ್ನು ಬೇಟೆಯಾಡಿತ್ತು. ನಮಗದರ ವಿಶಿಷ್ಟ ಶಕ್ತಿ ಮತ್ತು ಕ್ರೌರ್ಯ ಅನುಭವಕ್ಕೆ ಬಂದಿದ್ದು ಆಗಲೇ).

ಗೂಬೆ ಎಂದರೆ ನಮ್ಮ ಜನರಲ್ಲಿ ಒಂದು ಭಯಂಕರ ಭಯದ ಕಲ್ಪನೆ ಇದೆ. ಅದನ್ನು ಡೆವಿಲ್ ಬರ್ಡ್ ಎಂದೂ ಕರೆಯುತ್ತಾರೆ. ಮನುಷ್ಯರಂತೆಯೇ ದನಿ ಹೊರಡಿಸುವುದು ಅದರ ವಿಶೇಷತೆ.

ಕಲಾವಿದನೊಬ್ಬನ ಮನದಾಳಕ್ಕಿಳಿದ ಗೂಬೆ...

